3
B.COM (F+R) 2018

SS – 023

ಪ್ರಥಮ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವೆಂಬರ್ / ಡಿಸೆಂಬರ್ 2018
(F+R) (CBCS) (2017 – 18 and Onwards)
ಕನ್ನಡ ಭಾಷಾ ಪತ್ರಿಕೆ – I
ಕನ್ನಡ ಭಾಷಾ ಪಠ್ಯ

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 70

I. ಅ) ಕೆಳಗಿನ ಪದ್ಯದ ಭಾವಾರ್ಥ ಬರೆಯಿರಿ. **(6×1=6)**

ಒಡಲೊಡಮೆಯೆಂಬಿವೆರಡುಂ
ಕೆಡಲಿರ್ಪುವು ಕೆಡದ ಕಸವರಂ ಜಸಮದಱಿಂ
ಕೆಡುವೊಡಲೊಡಮೆಯನೆಂದುಂ
ಕೆಡದೊಡಮೆಗೆ ಮಾಱುಗುಡುವುದಿಱಿವ ಬೆಡಂಗಾ

ಆ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2×2=4)**

1) ಯಾಜ್ಞಸೇನಿ
2) ಮುಕ್ತಾಯಕ್ಕ
3) ಮರ್ತ್ಯ ಲೋಕ
4) ಕುವೆಂಪು.

ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(10×1=10)**

1) 'ದೇವರು ವಿವೇಕ-ವೈಚಾರಿಕತೆಯನ್ನು, ಪೂಜಾರಿ ಮೌಢ್ಯ-ಸಂಪ್ರದಾಯಗಳನ್ನು ಪೋಷಿಸುತ್ತಾರೆ' ಎಂಬುದನ್ನು ದೇವರು–ಪೂಜಾರಿ ಕವಿತೆ ಮೂಲಕ ಸಮರ್ಥಿಸಿ.
2) 'ಗಂಗಾಮಾಯಿ' ಕವಿತೆ ನಿಂತ ನೀರಾದ ಬದುಕನ್ನು ಹೇಗೆ ಖಂಡಿಸುತ್ತದೆ ?

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(5×2=10)**

1) ಬರ್ಮಾಚಾರಿ ಹೊನ್ನಪ್ಪಾಚಾರಿಯ ಮನೆಯಿಂದ ಕರಗಸ ತಂದ ಸಂದರ್ಭ.
2) 'ರೊಟ್ಟಿ' ಕತೆಯಲ್ಲಿ ಪೊಲೀಸನ ದೌರ್ಜನ್ಯ.
3) ಚಿಕ್ಕರಾಮ ಮತ್ತು ಪುಟ್ಟನಿಂಗನ ನಾಟಕದ ಪಾತ್ರಾಭಿನಯದ ಸ್ವಾರಸ್ಯ.

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(10×1=10)**

1) 'ಸೆರೆ' ಶೀರ್ಷಿಕೆಯ ಔಚಿತ್ಯವನ್ನು ವಿವರಿಸಿ.
2) ರೊಟ್ಟಿ ಕಿತ್ತುಕೊಂಡ ಪ್ರಸಂಗ ಮತ್ತು ಅದರಿಂದಾದ ಪರಿಣಾಮಗಳ ಬಗ್ಗೆ ಬರೆಯಿರಿ.

P.T.O.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(5×1=5)**

1) ಹುಲಿ ಬೇಟೆಗೆ ಹೋದ ರಾಜ ರಾಕ್ಷಸಿಯ ಕುತಂತ್ರಕ್ಕೆ ಬಲಿಯಾದ ಸಂದರ್ಭ.

2) ತೊಗಲು ಗೊಂಬೆಯಾಟದ ಪ್ರಾಚೀನತೆ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(10×1=10)**

1) 'ಧೀರಕುಮಾರ ಜಾನಪದ ಕತೆ ಸಾಹಸಗಳ ಮೊತ್ತ' ಈ ಹೇಳಿಕೆಯನ್ನು ವಿಶ್ಲೇಷಿಸಿ.

2) ಕಿತ್ತೂರಿನ ಸೈನ್ಯ ಬ್ರಿಟಿಷರ ಜೊತೆ ಹೋರಾಡಿದ ಸನ್ನಿವೇಶವನ್ನು ಲಾವಣಿಕಾರ ವರ್ಣಿಸಿರುವ ಬಗೆ ಹೇಗೆ ? ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(5×1=5)**

1) ಪ್ರಕಾಶಕ ಹಾಗೂ ಮಾರಾಟಗಾರರ ಸಮಸ್ಯೆಗಳು.

2) ಅಂಕಣ ಸಾಹಿತ್ಯಕ್ಕೆ ಹಾ.ಮಾ. ನಾಯಕರ ಕೊಡುಗೆ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(10×1=10)**

1) 'ಕನ್ನಡ ಗ್ರಂಥೋದ್ಯಮ ಭವಿಷ್ಯ' ದ ಬಗ್ಗೆ ಲೇಖಕರ ಅಭಿಪ್ರಾಯವೇನು ?

2) 'ವ್ಯಾಪಾರಂ ದ್ರವ್ಯ ಚಿಂತನಂ' ಇದ್ದದ್ದು 'ವ್ಯಾಪಾರಂ ದ್ರೋಹ ಚಿಂತನಂ' ಆದ ಬಗೆ ಮತ್ತು ಅದರ ಪರಿಣಾಮಗಳನ್ನು ವಿವರಿಸಿ.

---